

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕಡಲಾಚೆಯಿಂದ ಒಂದು ಪತ್ರ

"Mostly ಇವತ್ತು ಅವರು office ಗೆ ಬರೋ ಹಾಗೆ ಕಾಣಿಸೋಲ್ಲ" ಎಂದಾಗ ಸಭಿಕರು ಬಿದ್ದು ಬಿದ್ದು ನಕ್ಕರು. ಈ ಮಾತಿನಲ್ಲಿ ನಗುವಂತಹ ವಿಷಯ ಏನಿದೆ ಎಂದು ನಿಮಗೆ ಆಶ್ಚರ್ಯವುಂಟಾಗಬಹುದು. ಸಂದರ್ಭ: ಮೊನ್ನೆ ಉತ್ತರ ಅಮೇರಿಕೆಯ ಬಾಸ್ಟನ್ (Boston) ನಗರದಲ್ಲಿ ನಡೆದ 34ನೆಯ VSNA (Veerashaiva Samaja of North America) ವಾರ್ಷಿಕ ಸಮ್ಮೇಳನದಲ್ಲಿ ಏರ್ಪಡಿಸಿದ್ದ ಒಂದು ನಾಟಕ ಪ್ರದರ್ಶನ. ಸಮಾರಂಭದ ಸಂಘಟಕರು ಖ್ಯಾತ ಸಾಹಿತಿಗಳಾದ ಡಾ. ಪ್ರಭುಶಂಕರ ಅವರು ಬಸವಣ್ಣನವರನ್ನು ಕುರಿತು ಬರೆದ 'ಬೆರಗು' ಗ್ರಂಥವನ್ನು ಆಧರಿಸಿ ನಾಟಕವನ್ನು ಏರ್ಪಡಿಸಿದ್ದರು. ಕಲಾವಿದರಾರೂ ಬೆಂಗಳೂರಿನಿಂದ ಬಂದವರಲ್ಲ, ಕನ್ನಡ ನಾಡಿನಿಂದ ಹತ್ತಾರು ವರ್ಷಗಳ ಹಿಂದೆ ಇಲ್ಲಿಗೆ ಬಂದು ನೆಲೆಸಿರುವ ಯುವ ವಯಸ್ಸಿನ ಸಾಫ್ಟ್‌ವೇರ್ ಇಂಜಿನಿಯರುಗಳು. ನಾಟಕದ ತಾಲೀಮು ನಡೆದದ್ದು ಅವರವರ ಮನೆಗಳಲ್ಲಿ, ಆದರೆ ಒಟ್ಟಿಗೆ ಸೇರಿ ಅಲ್ಲ, ದೂರವಾಣಿಯ ಟೆಲಿಕಾನ್‌ಫರೆನ್ಸ್ ಮುಖಾಂತರ. ದೂರವಿದ್ದೂ ಹತ್ತಿರ ನಿಲ್ಲುವ ಪ್ರಯತ್ನ ಅವರದು. ಪ್ರದರ್ಶನದ ದಿನ ಬಣ್ಣ ಬಳಿದುಕೊಂಡು ಪೋಷಾಕು ಧರಿಸಿ ರಂಗಮಂಚದ ಮೇಲೆ ಬರುವವರೆಗೂ ಯಾರೂ ಒಟ್ಟಿಗೆ ಸೇರಿ ರಿಹರ್ಸಲ್ ಮಾಡಲು ಆಗಿರಲಿಲ್ಲ. ನಾಟಕ ನಿರ್ದೇಶಕ ಮತ್ತು ಬಸವಣ್ಣನ ತಂದೆಯ ಪಾತ್ರಧಾರಿ ಯಶವಂತ್ ಗಡ್ಡಿ ಇದ್ದದ್ದು ಕನೆಕ್ಟಿಕಟ್. ಅಲ್ಲಮಪ್ರಭು ಪಾತ್ರಧಾರಿ ಇದ್ದದ್ದು ನೂರಾರು ಮೈಲಿ ದೂರದಲ್ಲಿರುವ ನ್ಯೂಜೆರ್ಸಿ, ಗಂಗಾಂಬಿಕೆ-ನೀಲಾಂಬಿಕೆ ಪಾತ್ರಧಾರಿಯರು ಬಾಸ್ಟನ್, ಬಿಜ್ಜಳನ ಪಾತ್ರಧಾರಿ ನ್ಯೂ ಹ್ಯಾಂಪ್‌ಶೈರ್. ಇನ್ನಿತರ ಪಾತ್ರಧಾರಿಗಳು ಕೆನಡಾದ ಟೊರೊಂಟೋ ಮತ್ತಿತರ ನಗರದವರು. ಈ ನಾಟಕಕ್ಕೆ ಪ್ರೇರೇಪಣೆ ಒಂದು ವರ್ಷದ ಹಿಂದೆ ನಮ್ಮ ಈ ಅಂಕಣದಲ್ಲಿ 'ಬೆರಗು' ಗ್ರಂಥ ಕುರಿತು ಬರೆದ ಲೇಖನವೇ ಕಾರಣವೆಂದು ನಿರ್ದೇಶಕರಿಂದ ನಂತರ ತಿಳಿಯಿತು.

ರಂಗಮಂಚದ ಮೇಲೆ ನಾಟಕ ಆರಂಭವಾಯಿತು. "ಓ, ಅವನ ವಿಷಯವೆ? ಅದನ್ನೇನು ಕೇಳುತ್ತೀರಿ, ಬಿಡಿ. ನಮ್ಮ ವಂಶಕ್ಕೇ ಕೆಟ್ಟ ಹೆಸರು ತಂದವನು. ಬ್ರಾಹ್ಮಣನಿಗೆ ಮುಖ್ಯ ಜನಿವಾರ. ಅದನ್ನ ಯಜ್ಞೋಪವೀತ ಅಂತಾರೆ, ಪವಿತ್ರ ಅಂತಾರೆ. ಅಂಥದನ್ನೇ ಕಿತ್ತೆಸೆದನಲ್ಲ, ಅಂಥವನ ವಿಷಯ ಯಾವ ಬಾಯಲ್ಲಿ ಹೇಳಲಿ? ನೀಚ, ಪರಮ ನೀಚ. ಅಂಥವ ಏಕೆ ತಾನೆ ನಮ್ಮ ಮನೆಯಲ್ಲಿ ಹುಟ್ಟಿದನೋ" ಎಂದು ಬಸವಣ್ಣನ ತಂದೆ ಮಾದಿರಾಜ ರೇಗಾಡಿದರೆ, ತಾಯಿ ಮಾದಲಾಂಬೆ "ಎಂಟು ವರ್ಷದ ಮಗುವಿಗೆ ಇದು ಸರಿ, ಅದು ತಪ್ಪು ಅಂತ ಏನು ತಿಳಿಯುತ್ತೆ? ಇವರಿಗೆ ವಯಸ್ಸಾದ್ದು ದಂಡಕ್ಕೆ. ತಾಳ್ಮೆ ಎಂಬುದೇ ಇಲ್ಲ, ಮಗು ಪ್ರಶ್ನೆ ಕೇಳಿದರೆ ಉತ್ತರ ಹೇಳೋದು ಬಿಟ್ಟು ದಬ ದಬ ಬಡಿಯೋದು. ಉತ್ತರ ತಿಳಿಯದ್ದಕ್ಕೋ ಏನೋ! ಅರಿಯದ ಹಸುಳೆ ಜನಿವಾರ ಕಿತ್ತೆಸೆದದ್ದಕ್ಕೆ 'ಬ್ರಾಹ್ಮಣ್ಯವೇ ಹೊರಟು ಹೋಯಿತು' ಅಂತ ರೇಗಾಡ್ತಾರೆ" ಎಂದು ಮಗನ ಮೇಲೆ ಅನುಕಂಪ ತೋರಿಸುತ್ತಾಳೆ. ಹೀಗೆ ನಾಟಕ ಮುಂದುವರಿಯುತ್ತದೆ. ಬಾಲಕ ಬಸವಣ್ಣ ಕೂಡಲ ಸಂಗಮಕ್ಕೆ ಹೋಗಿ ಬೆಳೆದು ದೊಡ್ಡವನಾದ ನಂತರ ಕಲ್ಯಾಣಕ್ಕೆ ಹೋಗುತ್ತಾನೆ. ಬಿಜ್ಜಳನ ವಿಶ್ವಾಸಕ್ಕೆ ಪಾತ್ರನಾಗಿ ಅರಮನೆಯ ಭಂಡಾರದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಸ್ಥಾನವನ್ನು ಪಡೆಯುತ್ತಾನೆ. ಹಿರಿಯ ವಯಸ್ಸಿನ ಪಶುಪತಿ ಶಾಸ್ತ್ರಿಗಳಿಗೆ ಅಸಹನೆ ಉಂಟಾಗುತ್ತದೆ: "ಬಸವಣ್ಣ ಅನ್ನಬೇಡಿ, ಬಸವ ಅನ್ನಿ. ಅವನು ಯಾವ ಸೀಮೆ ಅಣ್ಣ, ಯಾರಿಗೆ ಅಣ್ಣ? ನೋಡಿ, ಅವನ ವಿಷಯ ಮಾತಾಡಬೇಕು ಅಂದರೆ ನನಗೆ ಆಗೋಲ್ಲ. ಅವನ ಹೆಸರೆತ್ತಿದರೆ ಕೋಪ ಬಂದು ಮೈಯೆಲ್ಲ ಉರಿಯುತ್ತೆ. ಶತ್ರು ಸ್ವಾಮಿ, ಅವನು, ನಮಗೆಲ್ಲ ಪರಮ ಶತ್ರು." ಶಾಸ್ತ್ರಿಗಳ ಪಾತ್ರಧಾರಿ ನಾಗರಾಜ್ ಗುಂಡಗತ್ತಿಗೆ ಸಿಟ್ಟಿನಲ್ಲಿ ಗಟ್ಟಿಮಾಡಿದ ಮುಂದಿನ ಮಾತು ಮರೆತು ಹೋಗುತ್ತದೆ. "ನೋಡಿ, ಮಧ್ಯಾಹ್ನವಾದರೂ ಕೆಲಸಕ್ಕೆ ಬಂದಿದ್ದಾನೆಯೇ? ಇಲ್ಲ..." ಇತ್ಯಾದಿ ಹೇಳಬೇಕಾಗಿತ್ತು, ನೆನಪಾಗಲಿಲ್ಲ, ಬಸವಣ್ಣ ಮಧ್ಯಾಹ್ನವಾದರೂ ಭಂಡಾರಕ್ಕೆ ಇನ್ನೂ ಬಂದಿರುವುದಿಲ್ಲ ಎಂಬ ಆಶಯವನ್ನು ನೆನೆಸಿಕೊಂಡ 'ಶಾಸ್ತ್ರಿಗಳ' ಬಾಯಿಂದ ಬಂದ spontaneous dialogue: "Mostly ಇವತ್ತು ಅವನು office ಗೆ ಬರೋ ಹಾಗೆ ಕಾಣಿಸೋಲ್ಲ...!"

ನಾಟಕ ಮುಂದುವರೆದು ಅನುಭವಮಂಟಪಕ್ಕೆ ಅಕ್ಕಮಹಾದೇವಿಯ ಪ್ರವೇಶ. ಅದುವರೆಗೂ ಪಾತ್ರಧಾರಿಗಳೆಲ್ಲರೂ ಕೈಯಲ್ಲಿ ಕಾರ್ಡ್‌ಲೆಸ್ ಮೈಕ್ ಹಿಡಿದುಕೊಂಡೇ ಮಾತನಾಡುತ್ತಿದ್ದರು. ನೋಡಿದವರಿಗೆ ಅದರಲ್ಲಿ ಯಾವ ಅಸಹಜತೆಯೂ ಕಾಣಿಸಿರಲಿಲ್ಲ, ಮಾತುಗಳು ಸರಿಯಾಗಿ ಕೇಳಿಸದಿದ್ದರೆ ಮೈಕ್ ಮೈಕ್ ಎನ್ನುತ್ತಿದ್ದರು. ಆದರೆ ಅಕ್ಕಮಹಾದೇವಿಯ ಪಾತ್ರದಲ್ಲಿ ನೀಳಕೇಶಧಾರಿಯಾಗಿ ಮೊಣಕಾಲವರೆಗೆ ಕಪ್ಪು ಉಣ್ಣೆಬಟ್ಟೆಯನ್ನು (fur) ಧರಿಸಿ ಕೈಯಲ್ಲಿ ಕಾರ್ಡ್‌ಲೆಸ್ ಮೈಕ್ ಹಿಡಿದು ವಚನವನ್ನು ಹಾಡುತ್ತಾ ಪ್ರವೇಶ ಮಾಡಿದ ಯುವತಿ ಮೇಘಾ 'American Pop Singer' ತರಹ ವಿಲಕ್ಷಣವಾಗಿ ಕಂಡಳು! ನಮ್ಮ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಮಾಡಿದ ಆಕೆಯ ಪ್ರಾಮಾಣಿಕ ಪ್ರಯತ್ನ ಪ್ರಶಂಸನೀಯವಾದರೂ ಆಕೆಯ cat-walk ನಡಿಗೆಯಲ್ಲಿ ಅಮೇರಿಕನ್ ಸಂಸ್ಕೃತಿ ನಿಚ್ಚಳವಾಗಿ ಗೋಚರಿಸುತ್ತಿತ್ತು. ಒಂದರ್ಥದಲ್ಲಿ ಅದು ಇಲ್ಲಿ ಹುಟ್ಟಿ ಬೆಳೆದ ಮಕ್ಕಳು ಎದುರಿಸುತ್ತಿರುವ ಸಾಂಸ್ಕೃತಿಕ ಸಂಘರ್ಷದ ಪ್ರತೀಕವಾಗಿತ್ತು.

ಇಲ್ಲಿನ ಅನಿವಾಸಿ ಭಾರತೀಯ ತಂದೆ-ತಾಯಂದಿರು ಮಕ್ಕಳ ಚಲನವಲನಗಳನ್ನು ಹದ್ದಿನ ಕಣ್ಣುಗಳಿಂದ ನೋಡುತ್ತಾರೆ. ದಾರಿಯಲ್ಲಿ ಮಾತನಾಡಿಸುತ್ತಿದ್ದ ಆ ಹುಡುಗ ಯಾರು? ಅವನಿಗೂ ನಿನಗೂ ಏನು ಸಂಬಂಧ? ಎಂದು ಜೋರು ಮಾಡುತ್ತಾರೆ. ಬಸವಣ್ಣ ಜಾತಿಯ ವಿರುದ್ಧ ಹೋರಾಡಿದ ಎಂದು ಬಾಯಿತುಂಬಾ ಹೊಗಳುತ್ತೀರಿ,

ಆದರೆ ಸ್ವಜಾತಿಯಲ್ಲಿಯೇ ಮದುವೆಯಾಗಬೇಕೆಂದು ಒತ್ತಾಯಿಸುತ್ತೀರಿ. ನಮಗೆ ನಮ್ಮದೇ ಆದ ಭಾವನೆಗಳಿವೆ, ಜವಾಬ್ದಾರಿಗಳಿವೆ. "The parents should not dictate us. We should be treated with respect" ಎಂದು ಯುವಸಮ್ಮೇಳನದಲ್ಲಿ ಜಾಸ್ಮಿನಾ ಮತ್ತು ಮನೀಷಾ ಎಂಬ ಯುವತಿಯರ ಬಲವಾದ ವಾದ. ಅವರ ಈ ವಾದ ಬಸವಣ್ಣನವರು ಬಾಲ್ಯದಲ್ಲಿ ತಮ್ಮ ತಂದೆಯ ವಿರುದ್ಧ ದನಿ ಎತ್ತಿದಂತೆಯೇ ಇತ್ತು!

ಇಲ್ಲಿನ ಭಾರತೀಯರು ಮಕ್ಕಳನ್ನು ತಮ್ಮ ಧರ್ಮ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆಸಬಯಸುತ್ತಾರೆ. ತಮ್ಮ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಿ ಅವರನ್ನು ಶೈಕ್ಷಣಿಕವಾಗಿ ಮುಂದೆ ತರಬೇಕೆಂದು ತುಂಬಾ ಕಾಳಜಿ ವಹಿಸುತ್ತಾರೆ. ಒಳೆಯ ಶಿಕ್ಷಣ ಯಶಸ್ಸಿಗೆ ಕಾರಣ ಎಂಬುದು ಅವರ ಬಲವಾದ ನಂಬಿಕೆ. ಅವರ ಮಕ್ಕಳೂ ಸಹ ಅಮೇರಿಕೆಯ ಮಕ್ಕಳಿಗಿಂತ ಚೆನ್ನಾಗಿ ಓದುತ್ತಾರೆ. ಇಲ್ಲಿಯ ಶಾಲಾಕಾಲೇಜುಗಳಲ್ಲಿ ಅವರದೇ ಮೇಲುಗೈ. ತಂದೆ-ತಾಯಂದಿರಿಗೆ ಮತ್ತು ಹಿರಿಯರಿಗೆ ಗೌರವ ಕೊಡುವುದು, ಎದುರು ಮಾತನಾಡದೇ ಇರುವುದು ಭಾರತೀಯ ಸಂಸ್ಕೃತಿ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೆ ಇಲ್ಲಿಯ ಶೈಕ್ಷಣಿಕ ಕ್ರಮ ಯಾರು ಎಷ್ಟೇ ದೊಡ್ಡವರಿರಲಿ ಪ್ರಶ್ನಿಸುವ ಮನೋಧರ್ಮವನ್ನು ಅವರಿಗೆ ಕಲಿಸಿದೆ. ತಾವು ಹೇಳಿದಂತೆ ಮಕ್ಕಳು ಕೇಳಬೇಕೆನ್ನುವುದು ತಂದೆ-ತಾಯಂದಿರ ನಿರೀಕ್ಷೆ. 'ಮಕ್ಕಳು ವಯಸ್ಸಿಗೆ ಬಂದ ಮೇಲೆ ಅವರನ್ನು ಸ್ನೇಹಿತರಂತೆ ಕಾಣಬೇಕು' (ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್) ಎಂಬ ಹಿತೋಕ್ತಿಯನ್ನು ಅವರು ಮರೆತಿದ್ದಾರೆ. ಮಕ್ಕಳು ಎಷ್ಟೇ ದೊಡ್ಡವರಾದರೂ ಅವರ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ. ಇಲ್ಲಿಯ ಮಕ್ಕಳು ಪ್ರತಿಭಟಿಸಿದಾಗ ಅವರಿಗೆ ಮನವರಿಕೆಯಾಗುವಂತೆ ತಿಳಿಹೇಳುವಲ್ಲಿ ವಿಫಲರಾಗಿ 'emotional blackmail' ಮಾಡುತ್ತಾರೆ. ಜೀವನಾನುಭವವಿಲ್ಲದ ಮಕ್ಕಳು ಹತಾಶರಾಗಿ ಸಾಂಸ್ಕೃತಿಕ ಸಂಘರ್ಷದಲ್ಲಿ ತೊಳಲಾಡುತ್ತಾರೆ.

ಮಕ್ಕಳು ತಪ್ಪು ಮಾಡಿದಾಗ ಅವರನ್ನು ಹೊಡೆಯುವುದು ಭಾರತದಲ್ಲಿ ಸರ್ವೆಸಾಮಾನ್ಯ. ಹಾಗೆಂದ ಮಾತ್ರಕ್ಕೆ ಅಮೇರಿಕನ್ನರು ತಮ್ಮ ಮಕ್ಕಳನ್ನು ಹೊಡೆಯುವುದಿಲ್ಲ ಎಂದು ಅಲ್ಲಗಳೆಯಲಾಗದು. ಕೆಲವು ವೇಳೆ ತಮ್ಮ ವೈಯಕ್ತಿಕ ಸುಖಸಂತೋಷಗಳಿಗೆ ಧಕ್ಕೆಯುಂಟಾದಾಗ ಸಿಡಿಮಿಡಿಗೊಂಡು ಮಕ್ಕಳನ್ನು ಕೊಂದು ಹಾಕಿದ ಉದಾಹರಣೆಗಳೂ ಇವೆ. ಇತ್ತೀಚೆಗೆ ಇಲ್ಲಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ದುರ್ಘಟನೆಯೆಂದರೆ ಸ್ವಂತ ತಾಯಿಯಿಂದಲೇ ಅಮಾನುಷ ಹತ್ಯೆಗೊಳಗಾದ ಮೂರು ವರ್ಷದ Caylee Marie Anthony ಎಂಬ ಮುಗ್ಧ ಬಾಲಕಿಯ ದುರ್ಮರಣ. ಮನೆಯ ಹಿಂಭಾಗದ ಕೈದೋಟದಲ್ಲಿ ರಹಸ್ಯವಾಗಿ ಹೂತಿಟ್ಟ ಮಗುವಿನ ಶವ ಪೋಲೀಸರಿಗೆ ದೊರೆತಿದ್ದು ಕಳೆದ ಮೂರು ವರ್ಷಗಳಿಂದ ವಿಚಾರಣೆ ನಡೆದು ಇಂದು ಆಕೆಯ ತಾಯಿ ನಿರ್ದೋಷಿಯೆಂದು ಇಲ್ಲಿಯ ನ್ಯಾಯಾಲಯ ತೀರ್ಪು ನೀಡಿರುವುದು ಅಮೇರಿಕೆಯ ನಾಗರಿಕರಿಗೆ ಸಖೇದಾಶ್ಚರ್ಯವನ್ನುಂಟುಮಾಡಿದೆ.

ಸಹೃದಯ ಓದುಗರೇ! ಸಭೆಯ ಕೊನೆಯಲ್ಲಿ ಇದಾವುದರ ಅರಿವಿಲ್ಲದ ಏಳು ವರ್ಷದ ಚಿಕ್ಕ ಬಾಲಕಿ ಸಾನಿಕಾ ಸುಶ್ರಾವ್ಯವಾಗಿ ಹಾಡಿದ ಸಿನೆಮಾ ಹಾಡು "ಮಳೆ ನಿಂತು ಹೋದ ಮೇಲೆ ಹನಿಯೊಂದು ಮೂಡಿದೆ..." ಆಕೆಯ ವಯಸ್ಸಿಗೆ ಮೀರಿದ ಭಾವ; ದೂರದರ್ಶನದಲ್ಲಿ ಬರುವ 'ಎದೆ ತುಂಬಿ ಹಾಡಿದೆನು' ಕಾರ್ಯಕ್ರಮದ ಪ್ರತಿರೂಪವಾಗಿತ್ತು. ಎಡಗೈಯಲ್ಲಿ ಕಾರ್ಡ್‌ಲೆಸ್ ಮೈಕ್ ಹಿಡಿದು ಬಲಗೈಯನ್ನು ಅಭಯಹಸ್ತದಂತೆ ಮೇಲೆತ್ತಿ ಹಾಡುತ್ತಿದ್ದ ಪುಟ್ಟ ಬಾಲಕಿಯ ವಿಶಿಷ್ಟ ಭಂಗಿ ಮಧುರವಾದ ತಾರಸ್ವರಗಳನ್ನು ಮುಟ್ಟುವ ಯತ್ನದಂತಿತ್ತು! ಸುಮಾರು 2 ಲಕ್ಷ ಡಾಲರ್ ಖರ್ಚು ಮಾಡಿದ್ದ ಸಮ್ಮೇಳನ ಮುಗಿಸಿಕೊಂಡು ಶಿಷ್ಯರೊಬ್ಬರ ಮನೆಗೆ ಬಂದಾಗ 'ಸಮ್ಮೇಳನದಲ್ಲಿ ಯಾವುದು ನಿನಗೆ ಹೆಚ್ಚು ಇಷ್ಟವಾಯಿತು?' ಎಂದು ಕೇಳಿದ್ದಕ್ಕೆ ಅವರ ಮನೆಯಲ್ಲಿದ್ದ ಪುಟ್ಟ ಬಾಲಕಿ ದಿಶಾ ಕೊಟ್ಟ ನಿರ್ಭಿಡೆಯ ಉತ್ತರ - ಸಭೆಯಲ್ಲಿ ಕೇಳಿದ ಪ್ರತಿಷ್ಠಿತರ ಯಾವ ಭಾಷಣವೂ ಅಲ್ಲ; ಅವಳ ವಯೋಮಾನದ ಮಕ್ಕಳು ಮಾಡಿದ ಸಮೂಹ ನೃತ್ಯ: "ಗಿಲಿ ಗಿಲಿ ಗಿಲಿ ಗಿಲಕ್ಕು, ಕಾಲು ಗೆಜ್ಜೆ ಝಣಕ್ಕು.....ಥಣಕ್ಕು..!"

ಬೋಸ್ಟನ್
7.7.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑